**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಇಂಡಿ.**
**ಸಿಸಿ.ನಂಃ 294/2016**

**ಪಿ.ಡಬ್ಲ್ಯೂ– 1**
**ಸಿ.ಡಬ್ಲ್ಯೂ– 2**

| | | |
|---|---|---|
| ಸಾಕ್ಷಿಯ ಹೆಸರು | : | ರಾಜಕುಮಾರು |
| ತಂದೆ/ಗಂಡನ ಹೆಸರು | : | ಪರಶುರಾಮ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಝುಳಕಿ. |

**ದಿನಾಂಕ: 11–08–2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ:**

ಚಾಸಾ–3 ಪರಿಚಯ ಇರುತ್ತದೆ.

ಈಗ ನಾನು ನೋಡುತ್ತಿರುವ ದಾಖಲೆ ಮೇಲೆ ನನ್ನ ಸಹಿ ಇರುತ್ತದೆ. ಸದರಿ ಜಪ್ತು ಪಂಚನಾಮೆಯಾಗಿದ್ದು, ಸದರಿ ದಾಖಲೆಯನ್ನು ಈಗ ನಿಪಿ– 1 ಎಂದು, ಅದರ ಮೇಲೆ ಇರುವ ಸಾಕ್ಷಿ ಸಹಿ ನಿಪಿ–1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 5–6 ವರ್ಷಗಳ ಹಿಂದೆ ಝುಳಕಿ ಬಸ್ ನಿಲ್ದಾಣದಲ್ಲಿ ಮಾಡಿರುತ್ತೇನೆ. ನಿಪಿ–1 ರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೆ ಪಂಚನಾಮೆ ಮಾಡಿಲ್ಲ ಮತ್ತು ಯಾವುದೆ ವಸ್ತುಗಳನ್ನು ಜಪ್ತು ಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪಂಚನಾಮೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಕೋರಿಕೊಂಡಿರುತ್ತಾರೆ. ಕಡತಗಳನ್ನು ಪರಿಶೀಲಿಸಿ ಆಲಿಸಿ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಸ.ಸ.ಅ. ರವರಿಂದ:**

ದಿ: 25.05.2015 ರಿಂದ ಮುಂಜಾನೆ 4 ರಿಂದ 8 ಗಂಟ ಅವದಿಯಲ್ಲಿ ಗೊಟ್ಯಾಳ ಸಮೀಪ ಒಂದು ಹಳ್ಳದ ಹತ್ತಿರ ಜೀಪ್ ನಿಲ್ಲಿಸಿ ಜಾಂಗೀರ ಭಾಷ ದರ್ಗದ ಹತ್ತಿರ ಒಬ್ಬ ವ್ಯಕ್ತಿ ಆಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಅಂತಾ ಗೊತ್ತಾಗಿ ಅಲ್ಲಿಗೆ ಹೋಗಿ ಆತನ ಮೆಲೆ ದಾಳಿ ಮಾಡಿದ 180 ಎಮ್.ಎಲ್ ಅಳೆತೆಯ ಬಿ.ಪಿ ಕಂಪನಿಯ 45 ಪೌಚುಗಳ ಪೈಕಿ 180 ಎಮ್.ಎಲ್ ಅಳೆತೆಯ ಒಂದು ಪೌಚನ್ನು ರಾಸಾಯಿನಿಕ ಪರಿಕ್ಷೆಗೆ ಮಾದರಿಯನ್ನು ತೆಗೆದು ನನ್ನ ಸಮಕ್ಷಮ ಜಪ್ತು ಪಂಚನಾಮೆಯನ್ನು ಮಾಡಿಕೊಂಡು ನಮ್ಮ ಸಹಿವುಳ್ಳ ಚೀಟ

ಮಾದರಿಗೆ ಅಂಟಿಸಿ ಪಂಚನೆಮಯನ್ನು ಮುಂಜಾನೆ 7 ರಿಂದ 8 ಗಂಟೆ ಅವಧಿಯಲ್ಲಿ ಜರುಗಿಸಿಕೊಂಡಿದ್ದರು ಎಂದರೆ ಸರಿಯಲ್ಲ.

ನನ್ನ ಸಮಕ್ಷಮ ನಿಪಿ–1 ರಂತೆ ಜಪ್ತು ಪಂಚನಾಮೆಯನ್ನು ಮಾಡಿಕೊಂಡು ಮಾದರಿಯನ್ನು ಬೇರ್ಪಡಿಸಿ ನಮ್ಮ ಸಹಿವುಳ್ಳ ಚೀಟಿ ಮಾದರಿಗೆ ಅಂಟಿಸಿ ಪಂಚನಾಮೆಗೆ ಜರುಗಿಸಿದರೂ ಸಹ ಇಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು:</u> ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇರುವುದಿಲ್ಲ ಅಂತಾ ನಿವೇದಿಸಿಕೊಂಡಿರುತ್ತಾರೆ.**

**ಮರುವಿಚಾರಣೆಃ ಇಲ್ಲ.**

**<u>(ತೆರೆದ ನ್ಯಾಯಾಲದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.</u>**

**ಓ.ಹೆ.ಕೆ. ಸರಿ ಇದೆ.**

**ಸಹಿ/–**

**ನ್ಯಾಯಿಕ ದಂಡಾಧಿಕಾರಿಗಳು, ಇಂಡಿ.,**